ಅನ್ನಿಸಿದೆ" ಎಂದು ಹನುಮಕ್ಕ ಸೆರಗಿನಲ್ಲಿ ಮುಖ ಮುಚ್ಚಿಕೊಂಡಳು.

ಅರುಂಧತಿ ಇದೀಗ ಮಧುವಂತಿಯ ಮುಖವನ್ನೇ ನೋಡತೊಡಗಿದಳು. ತಾನೇನೋ ತೀರಾ ಅಪರಾಧ ಮಾಡಿದವಳಂತೆ ಆಕೆ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕೂತಿದ್ದಳು. ಕೆನ್ನೆ ತುಂಬ ಗೀರಿದ ಗಾಯದ ಗುರುತು ಹಾಗೆ ಇದ್ದವು. ಕುತ್ತಿಗೆ ಬದಿಯೊಂದು ಊದಿಕೊಂಡೇ ಇತ್ತು. ಅತ್ತು ಅತ್ತು ಕಣಿವೆಯಾಳಕ್ಕಿಳಿದ ಕಣ್ಣಗುಡ್ಡೆಗಳು. ಒಣಗಿದ ತುಟಿಗಳು ಸರಿಯಾಗಿ ಬಾಚದೆ ಗಂಟು ಕಟ್ಟಿದ ತಲೆಗೂದಲು ಸುಕ್ಕು ಸುಕ್ಕು. ಹಳೆಯ ಚೂಡಿದಾರ. ಅರೆ, ತಾನು ಅಂದು ನೋಡಿದ ಹುಡುಗಿ ಇವಳೇಯಾ ಎನ್ನುವಷ್ಟು ಬದಲಾಗಿದ್ದಳು. ಛೇ ಹೆಣ್ಣು ಜೀವವೇ... ಅರುಂಧತಿಯ ಎದೆ ಕರಗಿತು. ಆ ಹುಡುಗಿಯ ತಲೆಯನ್ನೊಮ್ಮೆ ನೇವರಿಸಬೇಕೆನಿಸಿತು. "ಆ ಹುಡುಗಿಯೂ ಏನೂ ಕಮ್ಮಿ ಇಲ್ಲ ಊರ ತುಂಬಾ ಚೆಲ್ಲು ಚೆಲ್ಲಾಗಿ ಅಲೀತಾಳೆ. ಅವಳೋ ಅವಳ ಡ್ರೆಸ್ಸೋ ಆ ಲೆವೆಲ್ಲಿನವರೆಲ್ಲ ಅಷ್ಟೇ" ಮಣಿವೇಲು ಫೋನಿನಲ್ಲಿ ಯಾರಿಗೋ ಹೇಳಿದ್ದು ತಕ್ಷಣಕ್ಕೆ ನೆನಪಾಗಿ ಪಿಚ್ಚೆನ್ನಿಸಿತು. "ಈಗ ಮುಂದೇನು ಮಾಡಬೇಕು? ಮಣಿವೇಲುಗೆ ಹೇಳಲಾ?" ಅರುಂಧತಿ ಅನುಮಾನದಲ್ಲಿಯೇ ಕೇಳಿದಳು. ಹನುಮಕ್ಕ, "ಹೆಂಗಾರ ಮಾಡಿ ಅವನನ್ನ ಮದ್ವೆಗೆ ಒಪ್ಪಿಸುದ್ರೆ ಸಾಕಕ್ಕ. ತಾಳಿ ಅಂತ ಒಂದು ಬಿದ್ರೆ ಮರ್ಯಾದೆ ತನ್ನಿಂದ ತಾನೆ ಬತ್ತದೆ" ಎಂದಳು. ಅರುಂಧತಿಗೆ ಆಕೆ ಹೇಳಿದ್ದು ಸರಿ ಎನ್ನಿಸಿತಾದರೂ ಜೊತೆಯಲ್ಲೇ ದಿಗಿಲೂ ಹುಟ್ಟಿತು. "ಮದ್ವೆ ಆಗಿ ಆಮೇಲೆ ಹಿಂಸೆ ಕೊಟ್ಟರೆ" ಎಂದಳು. "ಅಯ್ಯೋ ಅದುನ್ನಾದ್ರು ಹೆಂಗಾರ ತಡ್ಕಬಹುದು. ಜನ್ರು ಮಾತು ಸಾವ್ರ ಶೂಲದಂಗೆ ಇರ್ತಾವೆ" ಎಂಬ ಮಾತು ಅರುಂಧತಿಗೆ ಸತ್ಯವೆನ್ನಿಸಿತು. "ಸರಿ ಏನಾದ್ರೂ ಮಾಡುವ" ಎನ್ನುತ್ತ ಅವರಿಬ್ಬರನ್ನು ಕಳಿಸಿದ್ದಳು.

ಅರುಂಧತಿ ಹೇಳುವುದೇನೋ ಸುಲಭವಾಗಿ ಹೇಳಿ ಬಿಟ್ಟಿದ್ದಳು. ಆದರೆ ಮಣಿವೇಲು ಈ ಬಗ್ಗೆ ಮಾತಾಡುತ್ತಾನಾ ಎನ್ನುವ ಅನುಮಾನ ಕಾಡುತ್ತಲೇ ಇತ್ತು. ತಾವಿಬ್ಬರೂ ಇಡೀ ದಿನಕ್ಕೆ ಒಂದೆರಡೂ ಮಾತನಾಡುವುದಿಲ್ಲವೆಂದು ನೆನಪಾಯಿತು. ದಿನಕಳೆದ ಹಾಗೆ ಗಂಡಹೆಂಡತಿ ನಡುವಣ ಬಂಧ ಗಟ್ಟಿಗೊಳ್ಳುತ್ತದೆ ಎಂಬುದು ಸುಳ್ಳು ಎಂದು ಆಕೆಗೆ ಎಂದೋ ಅನ್ನಿಸಿತ್ತು. ಮದುವೆಯಾದ ದಿನವೇ ಕಂಠಪೂರ್ತಿ ಕುಡಿದು ತನಗೂ ಆಕೆಗೂ ಸಂಬಂಧವೇ ಇಲ್ಲದವನಂತೆ ಅವ ಎದ್ದು ಹೋದ ಕ್ಷಣದಿಂದಲೂ ಮೌನ ಎನ್ನುವುದು ಅವಳ ಪಾಲಿಗೆ ಬೆಂಬಿಡದೆ ಅಂಟಿತ್ತು. ಇವ ತನ್ನನ್ನು ಮದುವೆಯಾದದ್ದೂ ಯಾತಕ್ಕೆ? ಮನೆ ಕೆಲಸಕ್ಕಾ, ಹಾಸಿಗೆಯಲ್ಲಿ ಮಲ ಮೂತ್ರ ಮಾಡಿಕೊಳ್ಳುವ ತನ್ನ ಅಮ್ಮನ ಆರೈಕೆಗಾ ಅಥವಾ ಬಡವರ ಹುಡುಗಿ ಮದುವೆಯಾದೆ ಎಂದು ತೋರಿಸಿಕೊಳ್ಳುವುದಕ್ಕಾ... ಆಕೆ ಯೋಚಿಸಿ ದಣಿದು ಹೋಗಿದ್ದಳು. ಇಷ್ಟಾದರೂ ಅವಳ ಬಾಯಿಂದ ಯಾವೊಂದು ಪ್ರಶ್ನೆಗಳು ಹೊರ ಬರುತ್ತಲೇ ಇರಲಿಲ್ಲ. ಅವ ಬಂದನೆಂದರೆ ಎದೆಯಲ್ಲಿ ತೌಡು ಕುಟ್ಟಿದಷ್ಟು ಭಯವಾಗುತ್ತಿತ್ತು. ಅವನ ಎತ್ತರದ ನಿಲುವು, ಸದಾ ಕೆಂಡವನ್ನುಗುಳವ ಅವನ ಕೆಂಪು ಕಣ್ಣು, ವ್ಯಂಗ್ಯ ನಗು. ಕಾರಣವಿಲ್ಲದೆ ನಿಂತಲ್ಲಿ ಕೂತಲ್ಲಿ ಬೈಯ್ಯುವ ಅವನ ಬೈಗುಳು. ಆದಷ್ಟು ಅವನ ಕಣ್ಣು ತಪ್ಪಿಸಿ ತಿರುಗುತ್ತಿದ್ದಳು. ಅಪ್ಪಿ ತಪ್ಪಿ ಕಿಟಕಿಯಲ್ಲಿ ನೋಡಿದರೂ ತೀಕ್ಷ್ಣವಾಗಿ ನೋಡುವ ಅವನ ನೆಟ್ಟ ನೋಟಕ್ಕೆ ಅವಳಿಗೆ ಅವಧಿಗಿಂತ ಮೊದಲು ಮುಟ್ಟಾಗುತ್ತಿತ್ತು. ಹಾಗಂತ ಅವನೇನು ಇವಳನ್ನು ಹಗಲಿನಲ್ಲಾಗಲಿ ರಾತ್ರಿಯಲ್ಲಾಗಲಿ ದೈಹಿಕವಾಗಿ ಹಿಂಸಿಸುತ್ತಿರಲಿಲ್ಲ. ಆದರೆ ಇವಳನ್ನು ಕಂಡಾಗಲೆಲ್ಲ "ನಿನ್ನ ನೋಡಿದ್ರೆ ಈ ಜನ್ಮಕ್ಕಲ್ಲ ಮುಂದಿನ ಜನ್ಮಕ್ಕೂ ಏನೂ ಅನ್ನಿಸಲ್ಲ" ಎನ್ನುತ್ತಿದ್ದ. ಆಗೆಲ್ಲ ಆಕೆ ಕನ್ನಡಿಯ ಮುಂದೆ ನಿಂತು ತನ್ನ ಅಗಲ ಕಣ್ಣುಗಳನ್ನು ಉಬ್ಬು ತುಟಿಗಳನ್ನು ತೆಳು ದೇಹವನ್ನು ನೋಡಿಕೊಳ್ಳುತ್ತಿದ್ದಳು. "ಏನು ಕಡಿಮೆಯಾಗಿದೆ ತನಗೆ?" ಯಾರನ್ನಾದರೂ ಕೇಳಬೇಕೆಂದುಕೊಳ್ಳುತ್ತಿದ್ದಳು. "ಯಾರನ್ನು ಕೇಳುವುದು?" ತಿಳಿಯದೇ ಸುಮ್ಮನಾದಳು. ತುಟಿಯವರೆಗೂ ಬಂದ ಮಾತುಗಳ ಹಿಡಿದುಕೊಂಡಳು. ಮಾತುಗಳು ಉಳಿದು